ಜನನ: 1130/1160
**ಹನ್ನೆರಡನೆಯ ಶತಮಾನ**
**ಶಿವಮೊಗ್ಗ ಜಿಲ್ಲೆ, ಶಿಕಾರಿಪುರ-ಶಿರಾಳ ಕೊಪ್ಪದ ನಡುವೆ ಇರುವ ಉಡುತಡಿ ಅಥವಾ ಉಡಗಣಿ/**
**ಐಕ್ಯಸ್ಥಳ: ಶ್ರೀಶೈಲಕದಳಿವನದ ಗುಹೆ**
**ಅಂಕಿತನಾಮ: ಚೆನ್ನಮಲ್ಲಿಕಾರ್ಜುನ**
**ಮಹಾದೇವಿಅಕ್ಕನವರು ಬರೆದಿರುವ: ಪ್ರಸಿದ್ಧಯೋಗಾಂಗತ್ರಿವಿಧಿ,**
**ಸೃಷ್ಟಿಯ ವಚನ ಮಂತ್ರಗೋಪ್ಯ ಮತ್ತು ಇತರೆ ವಚನಗಳು**
**ಹೆತ್ತವರು: ಲಿಂಗಮ್ಮ, ಓಂಕಾರಶೆಟ್ಟಿ**

**ವಚನ ಸಾಹಿತ್ಯದ ಪ್ರಮುಖರಲ್ಲೊಬ್ಬರು. ಅಕ್ಕಮಹಾದೇವಿಯವರುವಿಶ್ವದ ಪ್ರಥಮ ಮಹಿಳಾ ಕವಿಯತ್ರಿಯಾಗಿದ್ದಾರೆ. ಅಕ್ಕಮಹಾದೇವಿಯವರನ್ನು ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿ, ಅಕ್ಕನಾಗಿ, ಹೀಗೆ ಹಲವು ರೀತಿ ಗುರುತಿಸಬಹುದಾಗಿದೆ. ಚಿಕ್ಕ ವಯಸ್ಸಿನಲ್ಲೆ ಸಕಲ ಸುಖವನ್ನು ತ್ಯಜಿಸಿದ ಅಕ್ಕ, ಎದುರಿಸಿದ ಪರೀಕ್ಷೆಗಳು ಬಹಳಷ್ಟು. ಸಾಕ್ಷಾತ್ ಶಿವ(ಮಲ್ಲಿಕಾರ್ಜುನ)ನನ್ನು ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕನವರು ಹಲವಾರು ಭಕ್ತರಿಗೆ ಮಾದರಿಯಾಗಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿದ್ದ ಅಕ್ಕಮಹಾದೇವಿ, ನಿರ್ಮಲಶೆಟ್ಟಿ ಮತ್ತು ಸುಮತಿಯರ ಮಗಳು. ತಂದೆ ತಾಯಿಯರ ಹೆಸರು ಕವಿ ಕಲ್ಪನೆ ಇದ್ದೀತು ಅನ್ನುವುದು ಕೆಲವು ವಿದ್ವಾಂಸ, ಅನುಮಾನ.**
**ಹರಿಹರನ ಮಹದೇವಿಯಕ್ಕಗಳ ರಗಳೆಯ ಪ್ರಕಾರ ಊರಿನ ರಾಜ ಕೌಶಿಕ ಮಹದೇವಿಯನ್ನು ಮದುವೆಯಾಗಲು ಬಯಸಿ ಒತ್ತಾಯಿಸಿದ. ಅಕ್ಕ ಶರತ್ತುಗಳನ್ನು ವಿಧಿಸಿ ಮದುವೆಗೆ ಒಪ್ಪಿದರೂ ಕೌಶಿಕ ವಚನ ಭಂಗ ಮಾಡಿದಾಗ ಉಡುಗೆಯನ್ನೂ ತೊರೆದು ಮನೆ ಬಿಟ್ಟು ಹೊರಟುಬಿಡುತ್ತಾರೆ**
**ಇನ್ನು. ಕೆಲವು ಕಥನಪರಂಪರೆಗಳಲ್ಲಿ ಮತ್ತು ವಚನಗಳ**
**ಆಧಾರಗಳುಇವೆ ಅಕ್ಕ ಎಳವೆಯಲ್ಲೇ ಚನ್ನಮಲ್ಲಿಕಾರ್ಜುನನನ್ನು ವರಿಸಿದರುಅನ್ನುವುದೂ ಉಂಟು. 12ನೇ ಶತಮಾನದ, ಮಹಾನುಭಾವಿ, ಶಿವಯೋಗಿಣಿ ಅಕ್ಕಮಹಾದೇವಿಯವರು ರಚಿಸಿದ 'ಯೋಗಾಂಗತ್ರಿವಿಧಿ'ಯ. 'ಶಿವಯೋಗ ಸಾಧನೆಯ ವಿವಿಧ ಹಂತಗಳ ಸೂತ್ರೀಕರಣದಂತಿರುವ ಅಕ್ಕನ 'ಯೋಗಾಂಗತ್ರಿವಿಧಿ'ಯನ್ನು ವಿಶ್ಲೇಷಿಸುವುದು ಅಷ್ಟು ಸುಲಭವಲ್ಲ. ಆ ಎತ್ತರಕ್ಕೆ ಏರಿದವರಿಗಷ್ಟೇ ಅದು ಸಾಧ್ಯವಾಗುವ ಸಿದ್ಧಿ. ಅಂತರಂಗ ಬಹಿರಂಗಗಳ ಮಧ್ಯೆ ಇರುವ ಸದ್ದಡಗಿಸಿ, ಯಾವುದೇ ಗೊಂದಲವಿಲ್ಲದ ಅನನ್ಯವಾದ ಆ 'ಶೂನ್ಯ'ದ ಅನುಭಾವದ ಅಕ್ಕಮಹಾದೇವಿಯವರ ಪ್ರಚಲಿತವಿರುವ ವಚನಗಳನ್ನಷ್ಟೇ ಓದಿಕೊಂಡಿರುವವರಿಗೆ 'ಯೋಗಾಂಗತ್ರಿವಿಧಿ' ವಿಕಸನದ ಅನುಭವ ನೀಡುತ್ತದೆ.**
**ಎಂಬುದು ಒಂದು ಸಂಕ್ಷಿಪ್ತ ಕೃತಿ. ಇದನ್ನು ಗಮನವಿಟ್ಟು ಓದಿದಾಗ ವಚನ ವಾಙ್ಮಯದ ಹಿನ್ನೆಲೆಯಲ್ಲಿ ಮತ್ತು ಇಡೀ ಭಾರತೀಯ ದಾರ್ಶನಿಕ ಭಿತ್ತಿಯಲ್ಲಿ ಅಕ್ಕನವರ ಯೌಗಿಕ ಮತ್ತು ಅನುಭಾವಿ ದರ್ಶನ ಎಷ್ಟು ವಿಶಿಷ್ಟವೆನ್ನುವುದನ್ನು ಗುರುತಿಸಬಹುದು `ಯೋಗಾಂಗತ್ರಿವಿಧಿ~ಯಲ್ಲಿ ಅಕ್ಕ ಬಳಸುವ ಅಭಿವ್ಯಕ್ತಿಯ ಭಾಷೆ ಎಲ್ಲ ತತ್ವಪದಗಳಲ್ಲಿರುವಂತೆ ನೇರ ಮತ್ತು ಬೆಡಗಿನ ಶೈಲಿಗಳ ಮಿಶ್ರ.**
**ಕೆಲವು ಸಲ ಅರ್ಥಗಳು ಸ್ವಯಂಪ್ರಕಾಶವಾಗಿ ಬೆಳಗುತ್ತವೆ. ಕೆಲವು ಸಲ ಸಂಕೇತಗಳ ಬಳಕೆಯಿಂದ ಗೂಢವಾಗಿ ನಮ್ಮನ್ನು ತಲುಪುತ್ತವೆ.**
**ಇಷ್ಟಾದರೂ ಯೋಗಸಾಧನೆಯ ಬಗ್ಗೆ ಒಂದು ಸ್ಪಷ್ಟವಾದ ಸುವ್ಯವಸ್ಥಿತವಾದ ಗ್ರಹಿಕೆಯನ್ನು ಅದು ಮಂಡಿಸುತ್ತದೆ.**

**"ಯೋಗಾಂಗತ್ರಿವಿಧಿ"**
**ಸಂಸ್ಕೃತದ ಶಾಸ್ತ್ರಗ್ರಂಥಗಳ ಮಾದರಿಗೆ ಹೊರತಾಗಿಯೂ ಒಂದು ಶಾಸ್ತ್ರರಚನೆ. ವಿಶೇಷವೆಂದರೆ ಇಂಥಾ ಶಾಸ್ತ್ರಗ್ರಂಥದಲ್ಲೂ ಹಲವೆಡೆ ಅಕ್ಕನವರ ಕಾವ್ಯಪ್ರತಿಭೆ ಮಿಂಚುತ್ತದೆ. ಉದಾಹರಣೆಗೆ ಒಂದು ತ್ರಿಪದಿ: `ಮಾಗ ಮಾಸವು ಪೋಗಿ ಮೇಗೆ ಬರೆದಿತು ಚೈತ್ರ/ಬೇಗ ಮಾಮರನು ತಳಿರಿತ್ತು, ಅದ ಕಂಡು/ಕೂಗಿ ಕರೆದಿತ್ತು ಕಳಕಂಠ~. ಅಕ್ಕನವರ ಕಾವ್ಯಾತ್ಮಕ ವಚನಗಳನ್ನು ತಾತ್ಪರ್ಯಗೊಳಿಸುವುದು ಕಷ್ಟ. ಅವನ್ನು ಹಾಗೇ ಸವಿದು ಅರ್ಥಗಳನ್ನು ಒಳಗಿಳಿಸಿಕೊಳ್ಳಬೇಕು.**

**ಶ್ರೀ ಮಹಾಮಹಿಮನೆ | ಸೋಮಶೇಖರ ಗುರುವೆ**
**ಕಾಮಿತದ ಫಲವ ಕೊಡು ಕಂಡಾ | ಎನ್ನ ಹೃ**

ದ್ರಾಮದೊಳ್ ನಿಂದು ಮೆರೆ ಕಂಡಾ || 1 ||

ಮೊದಲು ಮಾಡುವೆ ನಾನು | ಸದಮಲ ಗುರುವಿನ
ಮೃದುಪಾದಗಳನು ಬಲಗೊಂಡು | ತತ್ವದ
ಚದರ ಪದಗಳನ್ತಾತು ಮುದದಿಂದ || 2 ||

ಜೀವ ಪರಮರ ಭೇದ | ಭಾವವನರಿವೊಡೆ
ಆವಾವ ಮುಖದೊಳಿರುತಿಹುದೊ | ಯೆನ್ನನು
ಭಾವಕ್ಕೆ ಬಂದುದನೊರೆವೆನು || 3 ||

ಶರಣರ ನೆಲೆಗಳನರಿವಡೆನ್ನಅಳವೆ
ಹರಿಯಜ ಸುರರಿಗಳವಲ್ಲ | ವೆಂದೆನ
ಲೊರೆವೆ ನಾನವರ ಕೃಪೆಯಿಂದ || 4 ||

ಎಲ್ಲ ದೇವರ ದೇವ ವಲ್ಲಭನೆ ಗುರು ಚನ್ನ
ಮಲ್ಲಿಕಾರ್ಜುನನೆ ಮನದೊಳಗೆ| ಇರು ಕಂಡಾ
ಬಲ್ಲಂತೆ ನಿಮ್ಮ ಸ್ತುತಿಸುವೆನು || 5 ||

ಆರು ಭೂತಂಗಳಲಿ ಆರು ತತ್ವದಲ್ಲಿ
ಪೂರೈಸಿ ಇಷ್ಟ ಘನವನ್ನು | ಮನದಲ್ಲಿ
ಆರೈದು ತಿಳಿದಡವ ಮುಕ್ತ || 6 ||

ಮಾಘಮಾಸವುಪೋಗೆ ಮೇಗೆ ಬಂದಿತು ಚೈತ್ರ
ಬೇಗ ಮಾಮರನು ತಳಿರಿತು | ಅದ ಕಂಡು
ಕೂಗಿ ಕರೆಯಿತ್ತು ಕಳಕಂಠ || 7 ||

ಆಕಾಶದೊಳಗಣ ಜ್ಯೋತಿಯ ಪ್ರಭೆ ಬಂದು
ಲೋಕಂಗಳೊಳಗೆ ಮುಸುಕಲು | ಅದರೊಳಗೆ
ಏಕಾಂಗಿಯಾದಡವ ಯೋಗಿ || 8 ||

ಒಂಬತ್ತು ವೆಜ್ಜದ ತುಂಬಿದ ಕೊಡನೊಳಗೆ
ಸಂಭ್ರಮದ ಮುತ್ತು ಇರುತಿಹುದು | ಅದರನುವ
ನಂಬಿಕಂಡವನೆ ಕಡು ಜಾಣ || 9 ||

ಅಷ್ಟದಳಕಮಲದ ಬಟ್ಟಬಯಲೊಳಗೊಂದು
ಮುಟ್ಟಬಾರದ ಘನವಿಹುದು | ಅದರೊಳಗೆ
ದೃಷ್ಟಿ ಇಟ್ಟವನೆ ನಿಜಮುಕ್ತ || 10 ||

ಕೋಡಗದ ಒಡಗೂಡಿ ಆಡುವ ನರಿನಾಯಿ
ಗೀಡಾದ ಮನೆಯ ಮುರಿದೆನು| ಮತ್ತೊಂದು
ಗೂಡಿನೊಳು ನಾನುಮೆರೆದಿಹೆನು || 11 ||

ಒಡಹುಟ್ಟಿದ್ದೈವರ ಒಡನೆ ಶಿರಗಳ ಹರಿದು
ಮಡದಿಯ ಕರವ ಹಿಡಿದಿಹೆನು | ಮುಂದಣ
ನಡುಬಟ್ಟೆಯೊಳಗೆ ನಡೆದಿಹೆನು  || 12 ||

ನುಡಿಯಬಾರದು ಹಣ್ಣು ಕಡೆಯೊಳಗಿರಲಾಗಿ
ಮಡದಿಯೋರ್ವಳು ಅದಕಂಡು ಗ್ರಹಿಸಲ್ಕೆ
ನುಡಿಯೊಳಗಾಗಿ ಮೆರೆಯಿತ್ತು || 13 ||

ನೂರೆಂಟು ಮಣಿಗಳನು ಮೂರು ಭಾಗವ ಮಾಡಿ
ಮೂರು ಪುರುಷರಿಗೆ ಅಳವಡಿಸಿ | ಮೂವರನು
ಸೇರಿ ನಾನಳಿದು ಬಯಲಾದೆ ||14 ||

ಒಂದು ರತ್ನವು ತಾನು ಮುಂದೆ ಈರಾರಾಗಿ
ಕುಂದದ್ವೆವತ್ತು ತೆರನಾದ | ರತ್ನವು
ಸಂದಿತು ಎನ್ನ ಮನದೊಳಗೆ. || 15 ||

ಊರೊಳಗಾಡುವ ಮಾರಿಯ ಹಿಡಿತಂದು
ಭಾರಿಯ ಕೋಳ ಅಳವಡಿಸಿ | ಆ ಪುರವ
ಮಾರಿದೆ ಒಬ್ಬ ಚದುರಂಗೆ || 16 ||

ಕೋಟಿ ರವಿಶಶಿಗಳಿಗೆ ಮೀಟಿದ ಪ್ರಭೆ ಬಂದು
ನಾಟಿತ್ತು ಎನ್ನ ಮನದೊಳಗೆ | ಅದರಿಂದ
ದಾಟಿದೆನು ಭವದ ಕುಣಿಗಳನು || 17 ||

ಅಂಬರದೊಳಗಣ ತುಂಬಿದ ಕೊಡನುಕ್ಕಿ
ಕುಂಭಿನಿಯ ಮೇಲೆ ಸುರಿಯಲು | ಮಾನವರು
ಸಾಂಬಲೋಕಕ್ಕೆ ತೆರಳಿದರು || 18 ||

ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
ಸುರಿವ ಅಮೃತವ ದಣಿದುಂಡ | ಕಾರಣವು
ತೊರೆದನು ಜನನ ಮರಣಗಳ || 19 ||

ಅಷ್ಟದಿಕ್ಕಿಲಿ ಅಷ್ಟಶಕ್ತಿಯರು ರುದ್ರರು
ಅಷ್ಟದಿಕ್ಪಾಲಗಣಗಳ | ನಡುವಿರ್ದ
ಕಟ್ಟಾಣಿ ಮುತ್ತ ಬರಸೆಳೆದೆ || 20 ||

ಒಂಬತ್ತು ದ್ವಾರದ ಇಂಬುಗಳ ಬಲಿವುತ್ತ
ತುಂಬಿ ಸುಷುಮ್ನೆಯೋಳು ಮನವ | ನೋಡಿ
ಕುಂಭದೊಳಮೃತ ಸುರಿವುದು || 21 ||

ಆರು ಮುಖ ಮುತ್ತನು ನೀರೊಳಗೆ ಇರಿಸಲು
ನೀರಳಿದು ಮುತ್ತು ಉಳಿಯಲು | ಆ ಮಣಿಯ
ಸೇರಿಸಿದೆನೆನ್ನಯ ಉರದೊಳಗೆ || 22 ||

ಉಪ್ಪರ ಗುಡಿ ಮೇಲೆ ಸರ್ಪನು ಹೆಡೆಯೆತ್ತಿ
ಎಪ್ಪತ್ತು ಪುರವ ನಲಿದುಂಡು | ದಣಿಯದೆ
ಕಪ್ಪೆಯ ಶಿರವ ಮುರಿಯಿತ್ತು || 23 ||

ಹಿತ್ತಲಬಾಗಿಲ ತೆರೆದು ಸತ್ತವನ ಎಬ್ಬಿಸಿ
ಹೆತ್ತಮ್ಮನ ಕರೆವ ಪಿಡಿಯಲು| ಅವಳೀಗ
ಇತ್ತಳ್ಳೆ ತನ್ನ ಪದಕವನು || 24 ||

ಕೋಣನ ಕೊಂಬಿನ ಮೇಲೆ ಮಾಣದೆ ಕಪಿಯೇರಿ
ಜಾಣೆಯ ಮನೆಯುವೊಳ ಪೊಗಲು| ಅವಳೆದ್ದು
ಕೋಣನ ಕಾಲಮುರಿದಿಹಳು || 25 ||

ಹೇಮಕೂಟದ ತುದಿಗೆ ಆ ಮಹಾ ಗಜವೇರಿ

ಸೋಮನ ಕಳೆಯ ಸವಿದುಂಡು | ಮದವೇರಿ
ಕಾಮನ ಪಿಡಿದು ಬಡಿಯಿತ್ತು || 26 ||

ಪಶ್ಚಿಮ ಕೊಳದಲ್ಲಿ ಅಬ್ಜ ತಾವರೆ ಅರಳಿ
ನಿಶ್ಚಳದ ಗಂಧವೆಸೆಯಲು| ಅದಕಂಡು
ಸಚ್ಚಿತ್ತದ ಭ್ರಮರ ಎರಗಿತ್ತು || 27 ||

ನವಪುರದೊಳಗೊಂದು ನವರತ್ನ ಬೆಲೆಯಾಗೆ
ನವನಾರಿಯರು ಅದಕಂಡು | ಕೊಳಲಿಕ್ಕೆ
ಭವಸೂತ್ರ ಹರಿದು ಬಯಲಾದೆ || 28 ||

ಬೆಟ್ಟದ ಮೇಲಣ ಕಿಚ್ಚು ಸುಟ್ಟಿತ್ತು ಕಾನನವ
ಅಷ್ಟಮೃಗಜಾತಿ ಅಳಿದವು| ಅದಕಂಡು
ಬಟ್ಟಬಯಲೊಳಗೆ ಮೆರೆದೆನು || 29 ||

ಕೊಂಡಕ್ಕೆ ಬೀಳ್ವಂತ ಲಂಡಸ್ತ್ರೀಯಳು ತಾನು
ದಂಡೆಯ ಕುಣಿಕೆ ಸಡಿಲಿಸಿ | ಕೊಂಡದ
ಕೆಂಡದೊಳಾಳಿ ಮುಳುಗಿದಳು || 30 ||

ಕುಂಡಲಿಯ ಸರ್ಪನು ತುಂಡ ಮೇಲಕೆ ತೆಗೆಯ
ಮಂಡಲವು ಮೂರು ಬೆಳಗಾಗೆ | ನಡುವಳ
ಖಂಡಜ್ಯೋತಿಯಲಿ ಬಯಲಾದೆ || 31 ||

ಅಷ್ಟಾವರಣದ ಹಣ್ಣು ಬಟ್ಟ ಬಯಲೊಳಗಿರಲು
ಅಷ್ಟಾಂಗಯೋಗಗಳ ಮಾಡಿ | ಬಳಲುವರಂ
ದೃಷ್ಟಿ ಇಡುವುದನ್ನು ಮರೆವರು || 32 ||

ನೆಲನಿಲ್ಲದ ತೋಟದಲಿ ಎಲೆಯಿಲ್ಲದ ಗಿಡ ಹುಟ್ಟಿ
ಫಲವಿಲ್ಲದ ಹಣ್ಣು ತಳೆದಿರಲು| ಅದ ಕಂಡು
ಮೆಲಲಿಲ್ಲದೆ ಹೋಗಿ ಸವಿದೆನು || 33 ||

ಸಪ್ತಸಾಗರ ಬತ್ತಿ ಹತ್ತು ಹಂಸೆಯು ಸತ್ತು
ಮುತ್ತು ಮಾಣಿಕವು ತಲೆದೋರೆ| ಅದ ಕಂಡು
ಸತ್ತವನು ಎದ್ದು ಕುಣಿದನು || 34 ||

ಹತ್ತು ಸಾಗರದಲ್ಲಿ ಮತ್ತೆ ಸ್ನಾನವ ಮಾಡಿ
ಮತ್ತೊಂದು ತೆರದ ಉಣಿಸುಗಳ | ನಾನುಂಡು
ಕತ್ತಲೆಯಳಿದು ಬೆಳಗಾದೆ || 35 ||

ಕರ್ತೃ ಶ್ರೀಗುರುರಾಯ ಮುತ್ತಿನ ಕವಚವ
ಅರ್ತಿಯಿಂದೆನಗೆ ಅಳವಡಿಸೆ | ಅದರಿಂದ
ಕಿತ್ತೆನು ಮಾಯಾಬಲೆಗಳನು || 36 ||

ನಡೆವೆನು ಲಿಂಗದ ಕೂಡೆ ನುಡಿವನು ಲಿಂಗದವೊಡನೆ
ಎಡವಿಡದೆ ಬಪ್ಪ ವಿಷಯದ | ಭೋಗಂಗಳ
ಕೊಡುವೆನು ಲಿಂಗಮುಖಗಳಿಗೆ || 37 ||

ಒಂಬತ್ತು ಚೌಕದಲಿ ಉಂಬುಡುವ ಮನೆಯನ್ನು
ನಂಬದೆ ಕಡೆಗೆ ತೊಲಗಿಸಿ | ಮುಂದಣ
ಸಂಭ್ರಮದ ಮನೆಗೆ ನಡೆದೆನು || 38 ||

ಗುರುವೆನ್ನ ಕಾಯವು ಹರನೆನ್ನ ಮನವಯ್ಯ
ಪರಮ ಜಂಗಮವೆ ಅನುಭಾವ | ಮುಖವೆನ್ನ
ಇರವೆಲ್ಲ ಲಿಂಗಮಯವಯ್ಯ || 39 ||

ಉಟ್ಟ ಸೀರೆಯ ಸೀಳಿ ತೊಡಿಗೆಯ ಮುರಿದು
ಬಿಟ್ಟೆನು ನಾನು ಬಿಡುಮುಡಿಯ | ಎಲೆ ದೇವ
ಕೊಟ್ಟೆನು ಎನ್ನ ತನುಮನವ || 40 ||

ಷಟ್ಕಮಲದೊಳಗಣ ಷಡ್ವಿಧ ಲಿಂಗಕ್ಕೆ
ಷಡ್ವಿಧೇಂಧ್ರಿಯಗಳ ಮುಖಮಾಡಿ | ವಿಷಯಗಳ
ಷಡ್ಭಕ್ತಿಯಿಂದ ಕೊಡುತಿಹೆನು || 41 ||

ಆಧಾರದೊಳಗಣ ಆದಿಯ ಲಿಂಗಕ್ಕೆ
ಮೇದಿನೀ ಘ್ರಾಣಮುಖಮಾಡಿ | ಗಂಧದ
ಮೋದವ ಕೊಡುವ ನಿಜಭಕ್ತ || 42 ||

ಆರೆಸಳ ಕಮಲದಲಿ ತೋರುವ ಲಿಂಗಕ್ಕೆ
ಸಾರಜಿಹ್ವೆಗಳ ಮುಖಮಾಡಿ | ರಸಗಳ
ಪೂರೈಸಿ ಕೊಡುವ ನಿಜ ನಿಷ್ಠ || 43 ||

ಹತ್ತೆಸಳ ಕಮಲದಲಿ ಗೊತ್ತಿನ ಲಿಂಗಕ್ಕೆ
ಮತ್ತೆ ನೇತ್ರಗಳ ಮುಖಮಾಡಿ | ರೂಪಿನ
ತುತ್ತುಗಳ ಕೊಡುವ ಅವಧಾನಿ || 44 ||

ದ್ವಾದಶದಳ ಕಮಲದ ಮೋದದ ಜಂಗಮಕೆ
ಸಾದರದ ತ್ವಕ ಮುಖಮಾಡಿ | ಸ್ಪರುಶದ
ಸ್ವಾದವ ಕೊಡುವ ಅನುಭಾವಿ || 45 ||

ಷೋಡಶದಳ ಕಮಲದಲಿ ಆಡುವ ಲಿಂಗಕ್ಕೆ
ಗಾಢದ ಶ್ರೋತ್ರ ಮುಖಮಾಡಿ | ಶಬ್ದವ
ನೀಡಿ ಕೊಡುತಿಹನು ಪರಿಣಾಮಿ || 46 ||

ದ್ವಿದಳತ್ರಿಕೂಟದಲಿ ಹುದುಗಿದ ಲಿಂಗಕ್ಕೆ
ಸದಮಲದ ಹೃದಯ ಮುಖಮಾಡಿ | ತೃಪ್ತಿಯ
ಒದಗಿ ಕೊಡುತಿಹನು ಚದುರೈಕ್ಯ || 47 ||

ಅಂಗದಾಶ್ರಯವಳಿದು ಲಿಂಗದಾಶ್ರಯವುಳಿದು
ಲಿಂಗದೊಳು ಮನವು ಒಡವರದ | ಕಾರಣವು
ಅಂಗಗುಣವೆನಗೆ ಇನಿತಿಲ್ಲ || 48 ||

ಗುರು ನಿಮ್ಮ ಚರಣವ ಮರೆಯನು, ಮರೆದಡೆ
ಪರಿಭವದ ಬಾಧೆ ಬರಲಯ್ಯಾ| ಕಡೆಯಲ್ಲಿ
ದೊರೆ ನರಕದೊಳಗೆ ತುಳಿಯಯ್ಯ || 49 ||

ನಡೆವಲ್ಲಿ ನುಡಿವಲ್ಲಿ ಉಡುವಲ್ಲಿ ಉಂಬಲ್ಲಿ
ಬಿಡೆನಯ್ಯ ನಿಮ್ಮ ಚರಣವ | ಈ ಛಲವ
ಕಡೆ ಮುಟ್ಟಿಸೆನಗೆ ಗುರುರಾಯ || 50 ||

ಘನಗುರುವೆ ನೀನೆನ್ನ ಮನದೊಳೇ ಇರು ಕಂಡ್ಯಾ

ಮನವ ಬಿಟ್ಟೆನಿತು ಅಗಲಿದಡೆ | ನಿಮಗಿನ್ನು
ಅನಘ ಶರಣರ ಅಡಿಯಾಣೆ || 51

ಆವಾವ ಭೋಗಗಳ ಜೀವಭಾವದಿ ನಾನು
ಭಾವಿಸಿ ಪಿಡಿದು ಸವಿದಡೆ | ನರಕದ
ಭಾವಿಯೊಳಗದ್ದಿ ತೆಗೆಯಯ್ಯ || 52 ||

ಗುರು ಕೊಟ್ಟ ಭೋಗವನ್ನು ಗುರುವಿಗೆ ನಾನಿತ್ತು
ಗುರುಮುಖದಿಂದ ಒದಗಿದ | ಶೇಷವನು
ಇರದೆ ನಾನುಂಡು ಸುಖಿಯಾದೆ || 53 ||

ಲಿಂಗವು ಬಂದೆನ್ನ ಅಂಗದೊಳು ನೆಲಸಲು
ಅಂಗವು ಲಿಂಗದೊಳಗಾದೆ | ಕಾರಣವು
ಹಿಂಗಿದವು ಎನ್ನ ಭವಗಳು || 54 ||

ನಾನಾ ಜನ್ಮಗಳೊಳಗೆ ನಾ ತೊಳಲುತಿರಲಾಗಿ
ನೀನೆನಗೆ ಬಂದು ಕೃಪೆಯಾದ | ಕಾರಣವು
ನಾ ನಿನ್ನ ಪಾದದೂಳಿಡವರೆದೆ || 55 ||

ಹಿಂದಣ ಭವಗಳೆಲ್ಲ ಸಂದಿತ್ತು ಇಲ್ಲಿಗೆ
ಮುಂದಿನ್ನು ಎನಗೆ ಭವವಿಲ್ಲ | ಗುರುರಾಯ
ಹೊಂದಿದೆನು ನಿಮ್ಮ ಚರಣದೊಳು || 56 ||

ನಿಮ್ಮ ತೊತ್ತಿನ ತೊತ್ತು ನಿಮ್ಮ ಭೃತ್ಯರ ಭೃತ್ಯೆ
ನಿಮ್ಮಡಿಯ ನಾನು ಮರೆಹೊಕ್ಕೆ | ಘನಗುರುವೆ
ನಿಮ್ಮ ಕೃಪೆಯಿಂದ ಸಲಹಯ್ಯಾ || 57 ||

ಎನ್ನ ಕಾಯವೆ ಗುರು ಎನ್ನ ಪ್ರಾಣವೆ ಲಿಂಗ
ಎನ್ನಂತರಾತ್ಮ ಚರಲಿಂಗ | ವಾಗಲು
ಇನ್ನುಂಟೆ ಎನಗೆ ತನುಮನವು || 58 ||

ಜಯ ನಿತ್ಯ ರೂಪನೆ ಜಯ ಸತ್ಯಸದ್ಗುರುವೆ
ಜಯಭಕ್ತರರಸ ಅಘಹರನೆ | ಮದ್ಗುರುವೆ
ಜಯ ಎನ್ನ ಮನದ ತವನಿಧಿಯ || 59 ||

ನಲ್ಲಳು ನಲ್ಲನ ಸುಖವ ಎಲ್ಲರಿಗೆ ಅರುಹುವಳೆ?
ಬಲ್ಲಡೆ ಅದರ ತೆರನಂತೆ| ಲಿಂಗಸುಖ
ಬಲ್ಲವರು ಪರರಿಗುಸುರುವರೆ || 60 ||

ಚಿನ್ನ ಬಣ್ಣಗಳಂತೆ ರನ್ನ ದೀಪ್ತಿಗಳಂತೆ
ಭಿನ್ನವಿಲ್ಲದೆ ಬೆರೆದಿಹರು | ಲಿಂಗದೊಳು
ಪನ್ನಗಧರನ ಶರಣರು || 61 ||

ಎಲ್ಲ ಭೋಗಂಗಳಲಿ ಪಲ್ಲಯಿಸಿ ಇರುವವರು
ಬಲ್ಲಡೆ ಅವರ ಪರಿಬೇರೆ |
ಶರಣರ ಖುಲ್ಲ ಮಾನವರು ಜರಿವರು || 62 ||

ಭಕ್ತರ ತೊತ್ತಾಗಿ ಇರಿಸೆನ್ನ
ಭಕ್ತರುಂಡುಳಿದ ವರಶೇಷ | ಗಳಕೊಂಬ
ನಿತ್ಯ ಸುಖವೆನಗೆ ಕೊಡು ಗುರುವೆ || 63 ||

ಎನ್ನವಗುಣಗಳ ಇನ್ನು ನೋಡದೆ ಗುರು
ಚನ್ನಮಲ್ಲೇಶ ಕ್ಷಪೆಗ್ಗೆದ | ಕಾರಣ
ಎನ್ನ ಪರಿಭವವು ಪರಿಯಿತ್ತು || 64 ||

ಬಲ್ಲವರೆ ಬಲ್ಲರು ಎಲ್ಲರಿಗೆ ತಿಳಿಯದು
ಕಲ್ಲೋಳಗೆ ಅನಲ ಇರುವಂತೆ | ಇದರನುವ
ಬಲ್ಲವರಿಗರ್ಥ ತಿಳಿವುದು || 65 ||

ಯೋಗಾಂಗ್ನತ್ರಿವಿಧಿಯ ರಾಗದಿಂ ಬರೆದೋದಿ
ರೋಗ ಭವಬಾಧೆ ಪರಿವುದು | ಲಿಂಗದೊಳ
ಗಾಗಿ ಸುಖದಿಂದ ಮೆರೆವರು || 66 ||

ಗುರುಚನ್ನಮಲ್ಲನ ವರಕ್ಷಪಾರಸವೆನ್ನ
ಶರೀರವ ತುಂಬಿ ಹೊರಸೂಸೆ | ಅದರಿಂದ
ಬರೆದೆನು ಬಲ್ಲ ಪರಿಯಲ್ಲಿ || 67 ||